(d) whether the Government has any proposal to deforest the necessary area of the Banhatti forest and grant the sites free of cost to handloom, houseless and landless weavers of Banhatti; if so, the time within which the sites would be granted?

Sri K. H. PATIL (Minister for Agriculture and Forest)—

(a) Yes.

(b) The matter is under consideration.

(c) No. Eviction proceedings have been stayed.

(d) Final report from the Chief Conservator of Forests is awaited.

ಶ್ರೀ ಪಿ. ಎಂ. ಭಂಗಿ.—ನನ್ನ 'ಬಿ' ಪ್ರಶ್ನೆಗೆ ಉತ್ತರವಾಗಿ ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ತಮ್ಮ ಕಡೆ ಅರ್ಜಿ ಕೊಟ್ಟು ಒಂದು ವರ್ಷವಾಯಿತು. ಆ ಬಗ್ಗೆ ಏನೂ ಪರಿಶೀಲನೆಯಾಗಿಲ್ಲ. ನಿವೇಶನ ಇಲ್ಲದವರಿಗೆ, ಲಕ್ಷಾವಧಿ ನಿವೇಶನಗಳನ್ನು ಹಳ್ಳಿಗಳಲ್ಲಿ ಕೊಡುತ್ತೇವೆ ಎಂದು ಸರ್ಕಾರದ ಪರವಾಗಿ ಏನು ಹೇಳಿದ್ದೀರೋ ಆ ಪ್ರಕಾರವಾಗಿ ಅಲ್ಲಿ ನಿವೇಶನ ಇಲ್ಲದ ಬಡ ನೇಕಾರರಿಗೆ ನಿವೇಶನಗಳನ್ನು ಕೊಡುವುದು ಉಚಿತವಲ್ಲವೇ? ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ನಿವೇಶನಗಳನ್ನು ಕೊಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್—ಕೊಡಬೇಕು ಎನ್ನುವುದರ ಸಲುವಾಗಿಯೇ ತಡವಾಗಿದೆ. ಸರ್ಕಾರದವರು ಅವರಿಗೆ ಎಷ್ಟೆಷ್ಟು ನಿವೇಶನಗಳನ್ನು ಕೊಟ್ಟರೆ ಸೂಕ್ತವಾದೀತು ಎನ್ನುವುದನ್ನು ಪರಿಶೀಲನೆ ಮಾಡಬೇಕು, ಅದರ ಸಲುವಾಗಿ ತಡವಾಗಿದೆ.

FAMILY PLANNING HEALTH UNIT DISPENSARIES AT MANCHALDHORE AND TARUR

220. Sri T. TAREGOWDA (Kallambella):—Will the Minister for Health be pleased to state :—

(a) whether there is any proposal to sanction a F.P. Health Unit Dispensary to Manchaldhore of Hagalwadi Hobl, Gubbi Taluk and another to Tarur, Sira Taluk during 1973-74 ;

(b) whether the Government has sanctioned F. P. and Health Dispensary to Tuppadakon, Bukkapatna Hobli, Sira Taluk and Theerthapura, Kandikere Hobli, Chikkanayakanahalli Taluk, Tumkur District and tenders were called for by the Executive Engineers concerned ;

(c) whether any tenders have been accepted; if so, when the buildings will be constructed in these places?

Sri H. SIDDAVEERAPPA (Ministser for Health).—

(a) No.

(b) Two sub-centres under Indian Population Project one at Tuppadakon and the other at Theerthapura have been sanctioned and tenders have been called for by the Executive Engineer of the I. P. P.

(c) Not yet; buildings will be constructed as soon as the tenderers are accepted.

ಶ್ರೀ ಟಿ. ತಾರೇಗೌಡ.—ಗುಬ್ಬಿ ತಾಲ್ಲೂಕಿನ ಹಗಲವಾಡಿ, ಹೋಬಳಿಯ ಮಂಚಲದೊರೆ ಹಾಗೂ ಸಿರಾ ತಾಲ್ಲೂಕು ತಾರೂರು ಗ್ರಾಮಗಳಿಗೆ ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟಿನ ಪ್ರಕಾರವಾದರೂ ಸರ್ಕಾರದವರು ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಏಕೆಂದರೆ, ತಾತ್ಕಾಲಿಕವಾಗಿ ಕಟ್ಟಡ ಕೊಡುತ್ತೇವೆಂದು ಅಲ್ಲಿಯ ಚೇರ್ಮನ್‌ರು ತಮ್ಮಲ್ಲಿಯೂ ಕೂಡ ಬಂದು ತಿಳಿಸಿದ್ದಾರೆ ಮತ್ತು ನನಗೂ ರೆಪ್ರಸೆಂಟೇಷನ್ ಕೊಟ್ಟಿರುತ್ತಾರೆ. ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟ ಪ್ರಕಾರ ಆಸ್ಪತ್ರೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡಿಸುತ್ತೇನೆ.

ಶ್ರೀ ಟಿ. ತಾರೇಗೌಡ—ತುಪ್ಪದಕೋಣ ಹಾಗೂ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನ ತೀರ್ಥಪುರಕ್ಕೆ ಇಂಡಿಯನ್ ಪಾಪ್ಯುಲೇಶನ್ ಪ್ರಾಜೆಕ್ಟ ಪ್ರಕಾರ ಆಸ್ಪತ್ರೆ ಕಟ್ಟುವುದಕ್ಕೆ ಟೆಂಡರ ಕರೆದಿದ್ದೇವೆಂದು ತಿಳಿಸಿದ್ದೀರಿ. ಟೆಂಡರ ಪ್ರಕಾರ ಕಂಟ್ರಾಕ್ಟನ್ನು ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಟೆಂಡರ್ ಕಾಲ್‌ಫಾರ್ ಮಾಡಿದ್ದು ಗೊತ್ತು.

ಶ್ರೀ ಟಿ. ತಾರೇಗೌಡ.—ಟೆಂಡರು ಮಂಜೂರಾದ ತಕ್ಷಣ ಕಟ್ಟಡ ಕಟ್ಟಿಸಿ ಆಸ್ಪತ್ರೆಗೆ ಅವಕಾಶ ಮಾಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಉದ್ದೇಶದಿಂದಲೇ ಟೆಂಡರನ್ನು ಕಾಲಫಾರ್ ಮಾಡಿರುವುದು.